Karnataka Housing Board
Building communities

# ಕರ್ನಾಟಕ ಗೃಹ ಮಂಡಳಿ

**ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಪ.ಪ್ರ/2026-27** **ದಿನಾಂಕ: 07-05-2026**

## ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಮೆ: ಪ್ರತಿಪಾಟಿ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರೊಂದಿಗೆ ಮಾರ್ಕೆಟಿಂಗ್ ಜಂಟಿ ಸಹಭಾಗಿತ್ವ ಯೋಜನೆಯಡಿ (Marketing JV) ಕೊಡಗು ಜಿಲ್ಲೆ, ಮಡಿಕೇರಿ ನಗರದ ಕೆ. ನಿಡುಗಣೆ ಗ್ರಾಮದ ವಿವಿಧ ಸರ್ವೆ ನಂಬರ್‌ಗಳನ್ನು ಒಳಗೊಂಡಂತೆ ಒಟ್ಟು 94.45 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ವಸತಿ ಬಡಾವಣೆಯನ್ನು ಎಲ್ಲಾ ಮೂಲಭೂತ ಹಾಗೂ ಸಾರ್ವಜನಿಕ ಸೌಲಭ್ಯಗಳೊಡನೆ ಅಭಿವೃದ್ಧಿಪಡಿಸಿದೆ. ಸದರಿ ಬಡಾವಣೆಯಲ್ಲಿನ ಈ ಕೆಳಕಂಡ ವರ್ಗದ ನಿವೇಶನಗಳ ಹಂಚಿಕೆಗೆ ಸಾರ್ವಜನಿಕರಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹಂಚಿಕೆಗೆ ಲಭ್ಯವಿರುವ ಸ್ವತ್ತುಗಳ ವಿವರ ಈ ಕೆಳಕಂಡಂತಿದೆ.

| ಸ್ಥಳ ಮತ್ತು ಜಿಲ್ಲೆ | ವರ್ಗ | ಅಂದಾಜು ಸ್ವತ್ತುಗಳು | ನೊಂದಣಿ ಶುಲ್ಕ (ರೂ) | ಆರಂಭಿಕ ಠೇವಣಿ (ರೂ) | ನಿವೇಶನಗಳ ಬೆಲೆ (ಪ್ರತಿ ಚ.ಅ.) |
|---|---|---|---|---|---|
| ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕೆ. ನಿಡುಗಣೆ ಗ್ರಾಮ, | EWS | 32 | 300/- | 50,000/- | 775/- |
| | LIG | 179 | 500/- | 1,75,000/- | 1,550/- |
| | MIG | 83 | 1000/- | 2,00,000/- | |
| | HIG-I | 139 | 1500/- | 2,50,000/- | |
| | HIG-II | 26 | 1500/- | 2,50,000/- | |
| **ಒಟ್ಟು ನಿವೇಶನಗಳು** | | **459** | | | |

ನೊಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿಸಲು ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಮೂಲಕ ದಿನಾಂಕ: **15-05-2026** ರಿಂದ ಅರ್ಜಿ ಸಲ್ಲಿಸಬಹುದಾಗಿದೆ. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 16-06-2026 ಆಗಿರುತ್ತದೆ.**

ಹೆಚ್ಚಿನ ಮಾಹಿತಿಗಾಗಿ ಜಂಟಿ ಸಹಭಾಗಿತ್ವ ಯೋಜನೆ ಪಾಲುದಾರರ ಸಂಸ್ಥೆಯ ಶ್ರೀ ದಯಾನಂದ ಕೆ.ಬಿ, ಮ್ಯಾನೇಜರ್, ದೂರವಾಣಿ ಸಂಖ್ಯೆ: 9739946532,ಶ್ರೀ ಗುರುರಾಜ್ ಸೈಟ್ ಇಂಜಿನಿಯರ್, ದೂರವಾಣಿ ಸಂಖ್ಯೆ: 9686202507. ಮತ್ತು ಹಂಚಿಕೆ ಹಾಗೂ ಅರ್ಜಿ ಸಲ್ಲಿಕೆ ಸಂಬಂಧ ವಿವರಗಳಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು/ಕಂದಾಯ ಅಧಿಕಾರಿಗಳು, ಕ.ಗೃ.ಮಂ., ಕೊಡಗು ಉಪ-ವಿಭಾಗ, ಮೈಸೂರು ಕಛೇರಿ ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 0821-2343094/0821-2543237 ಹಾಗೂ ಕಂದಾಯ ಅಧಿಕಾರಿ/ಸಹಾಯಕ ಕಂದಾಯ ಅಧಿಕಾರಿ, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ ಬೆಂಗಳೂರು ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 080-22273511, 308, 309 ಮೂಲಕ ಸಂಪರ್ಕಿಸುವುದು.

ಆಯುಕ್ತರು,
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು

**ಷರತ್ತು ಮತ್ತು ನಿಬಂಧನೆಗಳು:**

1) ಆಸಕ್ತಿ ಇರುವ ಸಾರ್ವಜನಿಕರು ನೊಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿಯನ್ನು e-payment ಮೂಲಕ ಪಾವತಿಸಿ ಆನ್‌ಲೈನ್ ಅರ್ಜಿ (Online Application) ಸಲ್ಲಿಸಬಹುದಾಗಿದೆ.

2) ಈ ಹಿಂದೆ ದಿನಾಂಕ: 29-06-2009 ರಂದು ಬೇಡಿಕೆ ಸಮೀಕ್ಷೆಯಲ್ಲಿ ಮಡಿಕೇರಿ ಯೋಜನೆಗೆ ಮನೆ ಹಾಗೂ ನಿವೇಶನಗಳಿಗಾಗಿ ಅರ್ಜಿ ಸಲ್ಲಿಸಿ ನೋಂದಣಿ ಶುಲ್ಕ ಪಾವತಿಸಿರುವ ಅರ್ಜಿದಾರರೂ ಸಹ ಪ್ರಸ್ತುತ ಯೋಜನೆಗೆ ನಿಗಧಿಪಡಿಸಿರುವ ಆರಂಭಿಕ ಠೇವಣಿ ಮೊತ್ತ ಪಾವತಿಸಬಹುದಾಗಿದೆ. ಸದರಿ ಯೋಜನೆಯಲ್ಲಿ ಮನೆಗಳನ್ನು ನಿರ್ಮಾಣ ಮಾಡದ ಕಾರಣ, ಮನೆಗಳಿಗಾಗಿ ಮಡಿಕೇರಿ ಯೋಜನೆಗೆ ಅರ್ಜಿ ಸಲ್ಲಿಸಿರುವ ಅರ್ಜಿದಾರರನ್ನು ನಿವೇಶನಗಳ ಹಂಚಿಕೆಗೆ ಪರಿಗಣಿಸಲಾಗುವುದು. ಸದರಿ ಬಡಾವಣೆಯಲ್ಲಿನ ಅನಿಯಮಿತ ನಿವೇಶನಗಳು ಒಳಗೊಂಡಂತೆ ಖಾಲಿ ಇರುವ ನಿವೇಶನಗಳನ್ನು ಇ-ಲಾಟರಿಗೆ ಪರಿಗಣಿಸಲಾಗುವುದು.

3) ದಿನಾಂಕ: 29-06-2009 ರಂದು ಬೇಡಿಕೆ ಸಮೀಕ್ಷೆಯಲ್ಲಿ ಮಡಿಕೇರಿ ಯೋಜನೆಗೆ ಅರ್ಜಿ ಸಲ್ಲಿಸಿ, ನೋಂದಣಿ ಶುಲ್ಕ ಪಾವತಿಸಿರುವ ಅರ್ಜಿದಾರರು ಪ್ರಸ್ತುತ ನಿಗದಿಪಡಿಸಲಾಗಿರುವ ಆರಂಭಿಕ ಠೇವಣಿ ಪಾವತಿಸಿದಲ್ಲಿ, ಸದರಿ ಅರ್ಜಿದಾರರ ಅರ್ಜಿಗಳನ್ನು ನಿವೇಶನಗಳ ಹಂಚಿಕೆಗೆ ಪ್ರಥಮ ಆದ್ಯತೆಯಲ್ಲಿ ಪ್ರತ್ಯೇಕವಾಗಿ ಪರಿಗಣಿಸಲಾಗುವುದು. ಹೊಸದಾಗಿ ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿ ಪಾವತಿಸುವ ಅರ್ಜಿದಾರರ ಅರ್ಜಿಗಳನ್ನು ಹಳೆ ಅರ್ಜಿದಾರರಿಗೆ ಹಂಚಿಕೆ ಮಾಡಿ, ಬಾಕಿ ಉಳಿಯುವ ನಿವೇಶನಗಳ ಹಂಚಿಕೆಗೆ ನಂತರದ ಆದ್ಯತೆಯಲ್ಲಿ ಪರಿಗಣಿಸಲಾಗುವುದು.

4) ಒಂದು ಬಾರಿ ನಿವೇಶನ ಹಂಚಿಕೆಯಾದ ನಂತರ ಯಾವುದೇ ಕಾರಣಕ್ಕೂ ಬದಲಿ ನಿವೇಶನ ನೀಡಲು ಅವಕಾಶವಿರುವುದಿಲ್ಲ.

5) ಸ್ವತ್ತುಗಳನ್ನು ಪ್ರವರ್ಗವಾರು ಮೀಸಲಾತಿಯನ್ವಯ ಕರ್ನಾಟಕ ಗೃಹ ಮಂಡಳಿ ಹಂಚಿಕೆ ರೆಗ್ಯುಲೇಶನ್ಸ್ 1983 ನಿಯಮ 9 ರಂತೆ ಪ್ರವರ್ಗವಾರು ಇ-ಲಾಟರಿ ಮುಖಾಂತರ ಹಂಚಿಕೆ ಮಾಡಲಾಗುವುದು.

6) ಆಯಾ ಪ್ರವರ್ಗವಾರು ಅಡಿಯಲ್ಲಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸುವರು (Sc/St/Defence/Ex-service, Central Govt, Phy-challenged person, Senior Citizen, others ) ದಾಖಲಾತಿಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

7) ನಿಗಧಿತ ಆರಂಭಿಕ ಠೇವಣಿ ಹಣಕ್ಕಿಂತ ಕಡಿಮೆ ಹಣ ಪಾವತಿಸಿದಲ್ಲಿ ಅಂತಹ ಅರ್ಜಿಗಳನ್ನು ಇ-ಲಾಟರಿಗೆ ಪರಿಗಣಿಸಲಾಗುವುದಿಲ್ಲ.

8) ಅರ್ಜಿ ಸಲ್ಲಿಸುವುದಕ್ಕೆ ಮೊದಲು 10 ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಕಾಲ ಅರ್ಜಿದಾರರು ಕರ್ನಾಟಕ ರಾಜ್ಯದ ಸಾಮಾನ್ಯ ನಿವಾಸಿಯಾಗಿರಬೇಕು.

9) ಅರ್ಜಿದಾರರು, ಅರ್ಜಿದಾರರ ಪತಿ/ಪತ್ನಿ ಮತ್ತು ಮಕ್ಕಳ ಹೆಸರಿನಲ್ಲಿ ಕರ್ನಾಟಕ ಗೃಹ ಮಂಡಳಿ ಅಥವಾ ಇನ್ನಿತರೆ ಯಾವುದೇ ಸ್ಥಳೀಯ ಸಂಸ್ಥೆ/ ಪ್ರಾಧಿಕಾರದಿಂದಾಗಲಿ ಫ್ಲಾಟ್/ಮನೆ/ನಿವೇಶನ ಪಡೆದಿರುವುದಿಲ್ಲವೆಂದು ನೋಟರಿ ಮೂಲಕ ಪ್ರಮಾಣೀಕರಿಸಿದ ಪ್ರಮಾಣಪತ್ರ (Affidavit) ವನ್ನು ಅಪ್‌ಲೋಡ್ ಮಾಡಬೇಕು.

10) ಆರ್ಥಿಕ ದುರ್ಬಲ ವರ್ಗದ (EWS) ನಿವೇಶನಗಳಿಗೆ ಅರ್ಜಿ ಸಲ್ಲಿಸುವವರು ತಮ್ಮ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದಲ್ಲಿ ವಾಸವಿರುವವರು ರೂ 1,20,000/- ಹಾಗೂ ನಗರ ಪ್ರದೇಶ ವ್ಯಾಪ್ತಿಯಲ್ಲಿ ವಾಸಿಸುತ್ತಿರುವವರು ರೂ.2,00,000/- ಮೀರದಿರುವ ಬಗ್ಗೆ ಆದಾಯ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದು ಅರ್ಜಿಯೊಂದಿಗೆ ಸಲ್ಲಿಸುವುದು.



11) ಸ್ವತ್ತುಗಳನ್ನು ಪೂರ್ಣ ಬೆಲೆಯ ಮಾರಾಟದ (Outright sale Basis) ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.

12) ಪ್ರಕಟಣೆಯಲ್ಲಿ ನಮೂದಿಸಿರುವ ಸ್ವತ್ತುಗಳ ಒಟ್ಟು ಸಂಖ್ಯೆಗಳು, ವರ್ಗವಾರು ಸ್ವತ್ತುಗಳು ಹಂಚಿಕೆಯ ಸಮಯದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.

ಪು.ತಿ.ನೋ

13) ನಿವೇಶನ ಹಂಚಿಕೆಯಾಗದೆ ಇರುವ ಅರ್ಜಿದಾರರಿಗೆ ಅರ್ಜಿಯೊಂದಿಗೆ ಪಾವತಿಸಿರುವ ಆರಂಭಿಕ ಠೇವಣಿಯನ್ನು ಯಾವುದೇ ಬಡ್ಡಿ ಇಲ್ಲದೆ ಮರುಪಾವತಿ ಮಾಡಲಾಗುವುದು. ಅಥವಾ ಹಂಚಿಕೆಗೆ ಲಭ್ಯವಿರುವ ನಿವೇಶನಗಳಿಗಿಂತ ಅಧಿಕ ಅರ್ಜಿಗಳು ಸ್ವೀಕೃತವಾದಲ್ಲಿ, ಲಭ್ಯವಿರುವ ನಿವೇಶನಗಳನ್ನು ಹಂಚಿಕೆ ಮಾಡಿದ ನಂತರದಲ್ಲಿ ಉಳಿಕೆಯಾಗುವ ಅರ್ಜಿಗಳನ್ನು ಯೋಜನೆಯಲ್ಲಿ ಮುಂದೆ ಬಿಡುಗಡೆಯಾಗುವ ಶೇ.60 ರಷ್ಟು ನಿವೇಶನಗಳನ್ನುಪರಿಷ್ಕೃತ ದರದಲ್ಲಿ ಹಂಚಿಕೆಗೆ ಪರಿಗಣಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ನಿವೇಶನ ಹಂಚಿಕೆಯಾಗದ ಅರ್ಜಿದಾರರು ಹಂಚಿಕೆ ನಂತರ ಮರುಪಾವತಿ ಅಥವಾ ಬಾಕಿ 60% ನಿವೇಶನಗಳ ಹಂಚಿಕೆಗೆ ಪರಿಗಣಿಸಲು ಒಪ್ಪಿಗೆ ಪತ್ರವನ್ನು ಪ್ರತ್ಯೇಕವಾಗಿ ನೀಡಬೇಕಾಗಿರುತ್ತದೆ.

14) ಹಂಚಿಕೆ ನಂತರ ರದ್ದತಿಯಾದಲ್ಲಿ ಆರಂಭಿಕ ಠೇವಣಿ ಹಣದಲ್ಲಿ ಶೇ.25 ರಷ್ಟು ಹಣವನ್ನು ಮುಟ್ಟುಗೋಲು ಹಾಕಿಕೊಂಡು ಮರುಪಾವತಿ ಮಾಡಲಾಗುವುದು.

15) ಯೋಜನೆಯನ್ನು ಜಮೀನಿನ ಏರಿಳಿತಕ್ಕೆ ಅನುಸಾರವಾಗಿ ವಿನ್ಯಾಸಗೊಳಿಸಿ ರಚಿಸಲಾಗಿದ್ದು, ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಸೂಕ್ತ ತಡೆಗೋಡೆ ಹಾಗೂ ಮಣ್ಣಿನ ಧಾರಣಾ ಸಾಮರ್ಥ್ಯಕ್ಕನುಸಾರ ಅಡಿಪಾಯಗಳನ್ನು (ನುರಿತ ತಾಂತ್ರಿಕತೆ ಮತ್ತು ತಂತ್ರಜ್ಞಾನ ಪರಿಸರಕ್ಕೆ ಧಕ್ಕೆಯಾಗದಂತೆ) ನಿರ್ಮಿಸುವ ಹಾಗೂ ವಿನ್ಯಾಸದಲ್ಲಿ ಕಟ್ಟಡ ಕಟ್ಟುವ ಮೊದಲು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ಅನುಮತಿ, ಪ್ರಾಧಿಕಾರದಿಂದ ತಾಂತ್ರಿಕ ಅಭಿಪ್ರಾಯ ಪಡೆಯಬೇಕಿರುತ್ತದೆ ಎಂಬ ಷರತ್ತಿಗೊಳಪಟ್ಟು ವಿನ್ಯಾಸ ನಕ್ಷೆಯು ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಯಾಗಿರುತ್ತದೆ. ಆದ್ದರಿಂದ ಹಂಚಿಕೆಯಾಗುವ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಪ್ರಾಧಿಕಾರದ ಮೇಲಿನ ಷರತ್ತು ಅನ್ವಯವಾಗುತ್ತದೆ.

16) ಜಂಟಿ ಸಹಭಾಗಿತ್ವ ಯೋಜನೆ ಅಡಿಯಲ್ಲಿ ವಸತಿ ಯೋಜನೆ ಕೈಗೊಳ್ಳಲು ಸರ್ಕಾರದಿಂದ ಅನುಮೋದನೆ ನೀಡಲಾಗಿರುವ ಆದೇಶ ಸಂಖ್ಯೆ: ವಇ 39 ಕ.ಗೃ.ಮಂ. 2016 ಬೆಂಗಳೂರು ದಿನಾಂಕ: 28-04-2016ರಲ್ಲಿ ವಿಧಿಸಿರುವ ಷರತ್ತಿನಂತೆ ಈ ಯೋಜನೆಯಲ್ಲಿ ತಕರಾರುಗಳು ಎದುರಾದಲ್ಲಿ ಖಾಸಗಿ ಅಭಿವೃದ್ಧಿದಾರರೆ ಪರಿಹರಿಸತಕ್ಕದ್ದು. ಸರ್ಕಾರದ ಅನುಮೋದನೆಯಂತೆ ಯೋಜನೆ ಅಭಿವೃದ್ಧಿಪಡಿಸುವ ಸಲುವಾಗಿ ಮಾರ್ಕೆಟಿಂಗ್ ಶುಲ್ಕ ಮಾತ್ರ ಪಾವತಿಸಿಕೊಂಡು ನಿರ್ವಹಿಸಿಕೊಂಡಿರುವ ಪರಸ್ಪರ ಒಪ್ಪಂದ ಪತ್ರ (MOU) ಕರಾರುಗಳನ್ವಯ, ಜಂಟಿ ಸಹಭಾಗಿತ್ವ ಪಾಲುದಾರರಾದ ಮೆ: ಪ್ರತಿಪಾಟಿ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ರವರೇ ಸದರಿ ಬಡಾವಣೆಯಲ್ಲಿ ಹಂಚಿಕೆಯಾಗುವ ಸ್ವತ್ತುಗಳ ಹಾಗೂ ಬಡಾವಣೆಯ ನಿರ್ವಹಣೆಗೆ ಸಂಬಂಧಿಸಿದಂತೆ ಹಾಗೂ ಬಡಾವಣೆಯನ್ನು ಮುಂದಿನ ನಿರ್ವಹಣೆಗಾಗಿ ಸ್ಥಳೀಯ ಸಂಸ್ಥೆಗೆ ಹಸ್ತಾಂತರ ಮಾಡುವುದಕ್ಕೆ ಸಹ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

17) ಸ್ವತ್ತುಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಜಂಟಿ ಸಹಭಾಗಿತ್ವ ಯೋಜನೆ ಪಾಲುದಾರರ ಸಂಸ್ಥೆಯ (a) ಶ್ರೀ ದಯಾನಂದ ಕೆ.ಬಿ, ಮ್ಯಾನೇಜರ್, ದೂರವಾಣಿ ಸಂಖ್ಯೆ: 9739946532 (b) ಗುರುರಾಜ್ ಸೈಟ್ ಇಂಜಿನಿಯರ್, ದೂರವಾಣಿ ಸಂಖ್ಯೆ: 9686202507. ಮತ್ತು ಹಂಚಿಕೆ ಹಾಗೂ ಅರ್ಜಿ ಸಲ್ಲಿಕೆ ಸಂಬಂಧ ವಿವರಗಳಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು/ಕಂದಾಯ ಅಧಿಕಾರಿಗಳು, ಕ.ಗೃ.ಮಂ., ಕೊಡಗು ಉಪ-ವಿಭಾಗ, ಮೈಸೂರು ಕಛೇರಿ ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 0821-2343094/0821-2543237 ಮೂಲಕ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಇತರೆ ಹೆಚ್ಚಿನ ಮಾಹಿತಿಗಾಗಿ ಕಂದಾಯ ಅಧಿಕಾರಿ/ಸಹಾಯಕ ಕಂದಾಯ ಅಧಿಕಾರಿ, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ ಬೆಂಗಳೂರು ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 080-22273511, 308, 309 ಮೂಲಕ ಹಾಗೂ ವೆಬ್‌ಸೈಟ್ https://www.khb.karnataka.gov.inಯಿಂದ ಮಾಹಿತಿ ಪಡೆಯಬಹುದು.

ಆಯುಕ್ತರು,
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು